# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 952 (993)
2. ಸದಸ್ಯರ ಹೆಸರು : ಶ್ರೀ ಸಿ.ಟಿ ರವಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 12.03.2026
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಭದ್ರಾ ಉಪ ಕಣಿವೆಯಿಂದ ಲಿಫ್ಟ್ ಮೂಲಕ ತರೀಕೆರೆ-ಕಡೂರು-ಚಿಕ್ಕಮಗಳೂರು ತಾಲ್ಲೂಕುಗಳ ಕೆರೆಗಳನ್ನು ತುಂಬಿಸುವ ಮೊದಲನೇ ಹಂತದ ಕಾಮಗಾರಿ ಪೂರ್ಣಗೊಂಡಿದೆಯೇ; ಇಲ್ಲದಿದ್ದರೆ, ಮೊದಲನೇ ಹಂತದಲ್ಲಿ ಇನ್ನೂ ಎಷ್ಟು ಕಾಮಗಾರಿಗಳು ನಿರ್ವಹಿಸಲು ಬಾಕಿ ಇದೆ; | ಭದ್ರಾ ಉಪ ಕಣಿವೆಯಿಂದ ಲಿಫ್ಟ್ ಮೂಲಕ ತರೀಕೆರೆ-ಕಡೂರು-ಚಿಕ್ಕಮಗಳೂರು ತಾಲ್ಲೂಕುಗಳ ಕೆರೆಗಳನ್ನು ತುಂಬಿಸುವ ಮೊದಲನೇ ಹಂತದ ಕಾಮಗಾರಿ ಇದುವರೆಗೂ ಶೇ.95 ರಷ್ಟು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.<br><br>ತರೀಕೆರೆ ತಾಲ್ಲೂಕಿನ ದೋರನಾಳ ಗ್ರಾಮದ ಸರ್ವೇ 309/1 ರ ಜಮೀನಿನಲ್ಲಿ ಕಾಮಗಾರಿಯನ್ನು ನಿರ್ವಹಿಸದಂತೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪೆಟಿಷನ್ ನಂ- 23160/2025 ರಲ್ಲಿ ಆದೇಶಿಸಿರುವುದರಿಂದ 16 ಕಿ.ಮೀ ಪೈಕಿ ಸುಮಾರು 0.17 ಕಿ.ಮೀ ನಿರ್ವಹಿಸುವುದು ಬಾಕಿಯಿದ್ದು, ಇತ್ಯರ್ಥಗೊಳಿಸಿಕೊಂಡು ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿ, ಮಾರ್ಚ್-2026ರ ಅಂತ್ಯಕ್ಕೆ ಪ್ರಾಯೋಗಿಕವಾಗಿ ನೀರನ್ನು ಹರಿಸಿ ಕಾಮಗಾರಿಯನ್ನು ಲೋಕಾರ್ಪಣೆಗೊಳಿಸಲು ಗುರಿ ಹೊಂದಲಾಗಿದೆ. |
| ಆ) | ಮೊದಲನೇ ಹಂತವನ್ನು ಯಾವಾಗ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗುವುದು; (ವಿವರ ಒದಗಿಸುವುದು) | |
| ಇ) | ಎರಡನೇ ಹಂತದ ಕಾಮಗಾರಿಯಲ್ಲಿ ಎಷ್ಟು ಪ್ರಗತಿ ಸಾಧಿಸಲಾಗಿದೆ ಹಾಗೂ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; | ಎರಡನೇ ಹಂತದ ಕಾಮಗಾರಿಯಲ್ಲಿ ಇದುವರೆಗೂ ಶೇ.55 ರಷ್ಟು ಭೌತಿಕ ಪ್ರಗತಿ ಸಾಧಿಸಲಾಗಿದ್ದು, ಕಾಮಗಾರಿಯನ್ನು ಡಿಸೆಂಬರ್-2026ರ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. |
| ಈ) | ಮೂರನೇ ಹಂತದ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆಯೇ; ಯಾರಿಗೆ ಗುತ್ತಿಗೆ ನೀಡಲಾಗಿದೆ; ಮೂರನೇ ಹಂತದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ವಿವರ ಒದಗಿಸುವುದು) | ಮೂರನೇ ಹಂತದಡಿ ಯೋಜಿಸಿರುವ 113 ಕೆರೆಗಳಲ್ಲಿ ಕಡೂರು, ಚಿಕ್ಕಮಗಳೂರು ಹಾಗೂ ಅರಸೀಕೆರೆ ತಾಲ್ಲೂಕಿನ ಭಾಗಶಃ ಒಟ್ಟು 77 ಕೆರೆಗಳನ್ನು ತುಂಬಿಸಲು ರೂ.407.50 ಕೋಟಿಗಳ ಮೊತ್ತಕ್ಕೆ ಟೆಂಡರ್ ಆಧಾರದ ಮೇಲೆ M/s BRUNDAVANA CONSTRUCTIONS PRIVATE LIMITED - M/s KDH Infra Engineering Private Limited (JV) ರವರಿಗೆ ಗುತ್ತಿಗೆ ಪ್ರಕ್ರಿಯೆ ಜಾರಿಯಲ್ಲಿದ್ದು, ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಲು ಕ್ರಮ ಜರುಗಿಸಲಾಗುತ್ತಿದೆ. |

**ಸಂಖ್ಯೆ: ಜಸಂಇ 27 ಡಬ್ಲ್ಯೂಎಲ್ಎ 2026**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**